ಅಪರ ಸರ್ಕಾರಿ ಅಭಿಯೋಜಕರು ...
ಜಿಲ್ಲಾ ನ್ಯಾಯಾಲಯ ಆವರಣ
ಕಲಬುರಗಿ-585 102

ಸಂಖ್ಯೆ:ಪಿಪಿ3/ಕಲಬುರಗಿ/ಪ.ಪ್ರ/ /2021-22
ಎಸ್.ಸಿ.ನಂ:77/2019

3ನೇ ಸರಕಾರಿ ಅಭಿಯೋಜಕರ ಕಛೇರಿ
ಕಲಬುರಗಿ
ದಿನಾಂಕ:-14/01/2022

## ಪತ್ರಿಕಾ ಪ್ರಕಟಣೆ
## ಆರೋಪಿತನಿಗೆ ಜೀವಾವಧಿ ಶಿಕ್ಷೆ ವಿಧಿಸಿರುವ ಬಗ್ಗೆ.

**ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

ಮಾನ್ಯ ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿ ಪೈಕಿ ಹಿರಾಪೂರ ಬಡಾವಣೆಯಲ್ಲಿರುವ ಸಾಕ್ಷಿ ನಂ- 11 ಸಂಗಣ್ಣಾ ಗೌಡಗಾಂವ ರವರ ಮನೆಯ ಪಡಸಾಲೆಯಲ್ಲಿ **ಆರೋಪಿತನಾದ ಸಂತೋಷ ಅಣ್ಣಾರಾಯ ಪಾಟೀಲ್ ಸಾ// ರೇವೂರ (ಬಿ) ತಾ// ಅಫಜಲಪೂರ** ಇವನು ತನ್ನ ಹೆಂಡತಿ ಸವಿತಾ ಇವಳೊಂದಿಗೆ ಜಗಳ ಮಾಡುತ್ತಿದ್ದಾಗ ಸಾಕ್ಷಿ ನಂ-6 ಆರೋಪಿತನ ಹಾಗೂ ಮೃತಳ ಮಗನು ಸಾಕ್ಷಿ ನಂ-1 ಶ್ರೀಮತಿ ಶರಣಮ್ಮ ಗಂಡ ಸಿದ್ಧರೂಢ ಕೌಲಗಿ ರವರಿಗೆ ಕರೆದುಕೊಂಡು ಬರಲು ಅವರ ಮನೆಗೆ ಹೋಗಿ ಕರೆದುಕೊಂಡು ಬಂದಾಗ ಅದೇ ಸಮಯಕ್ಕೆ ಆರೋಪಿತನು ತನ್ನ ಹೆಂಡತಿ ಸವಿತಾಳಿಗೆ ಅವಾಚ್ಯವಾಗಿ ಬೈದು ನನ್ನ ಮೇಲೆ ಕೇಸು ಮಾಡಿ ಜೈಲಿಗೆ ಕಳಿಸಿದ್ದಿಯಾ ಅಂತಾ ಬೈಯುತ್ತಾ ತನ್ನ ಮನೆಯಲ್ಲಿದ್ದ ಕಬ್ಬಿಣದ ಖಾರ ಕುಟ್ಟುವ ಹಾರೆಯಿಂದ ಸವಿತಾಳ ಬಲ ತಲೆಯ ಮೇಲೆ, ಕಿವಿಯ ಹತ್ತಿರ, ಕಿವಿಯ ಹಿಂದುಗಡೆ, ಬಲಗಡೆ ಕಣ್ಣಿನ ಹತ್ತಿರ ಮೆಲಕಿನ ಹತ್ತಿರ ಜೋರಾಗಿ ಮೂರು ನಾಲ್ಕು ಏಟು ಹೊಡೆದು ಕೊಲೆ ಮಾಡಿದ್ದು ನಂತರ ಸ್ಥಳದಿಂದ ಓಡಿಹೋಗಿದ್ದು ಇರುತ್ತದೆ ಎಂದು ಆರೋಪಿತನ ವಿರುದ್ಧ ತನಿಖೆ ಮಾಡಿ **ತನಿಖಾಧಿಕಾರಿಗಳಾದ ಶ್ರೀ ಎ.ವಾಜೀದ್ ಪಟೇಲ್ ಆರಕ್ಷಕ-ನಿರೀಕ್ಷಕರು ಗ್ರಾಮೀಣ ಪೊಲೀಸ್ ಠಾಣೆ, ತನಿಖೆ ಪೂರ್ಣಗೊಳಿಸಿ,** ದೋಷಾರೋಪಣೆ ಪತ್ರ ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು. ಸಾಕ್ಷಿದಾರನ್ನು ಮಾನ್ಯ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಗ್ರಾಮೀಣ ಪೊಲೀಸ್ ಠಾಣೆಯ ಶ್ರೀ ಲಕ್ಷ್ಮೀಕಾಂತ ಪಿ.ಸಿ.ನಂ- 256, ಜಾಹೀದ ಪಿ.ಸಿ.ನಂ- 1062 ಹಾಜರು ಪಡಿಸಿದ್ದು ಇರುತ್ತದೆ.

ನಂತರ ಪ್ರಕರಣದ ವಿಚಾರಣೆಯನ್ನು ಮಾನ್ಯ ಶ್ರೀ. ಜಗದೀಶ್ ವ್ಹಿ.ಎನ್, 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕಲಬುರಗಿ ನಡೆಸಿ, ನಂತರ ಸಾಕ್ಷ್ಯಾಧಾರಗಳನ್ನು ಪರಾಮರ್ಶಿಸಿ, ಆರೋಪಿತನಾದ ಸಂತೋಷ ಅಣ್ಣಾರಾಯ ಪಾಟೀಲ್ ಸಾ// ರೇವೂರ (ಬಿ) ತಾ// ಅಫಜಲಪೂರ ಇವರ ವಿರುದ್ಧ ಅಪರಾಧ ಸಾಬೀತಾಗಿ, ತಪ್ಪಿತಸ್ಥರೆಂದು ನಿರ್ಣಯಿಸಿ, ಆರೋಪಿಗೆ ಕಲಂ:-302, 504, ಐಪಿಸಿ ಅಡಿಯಲ್ಲಿ ಜೀವಾವಧಿ ಕಾರಾಗೃಹ ವಾಸದ ಶಿಕ್ಷೆ ವಿಧಿಸಿ ಮೃತಳ ಮಕ್ಕಳು ಪರಿಹಾರಕ್ಕಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಲು ಆದೇಶಿಸಿದ್ದು ಇರುತ್ತದೆ.

ಸರಕಾರದ ಪರವಾಗಿ ಶ್ರೀ ಗುರುಲಿಂಗಪ್ಪ ಶ್ರೀಮಂತ ತೇಲಿ, 3ನೇ ಅಪರ ಸರಕಾರಿ ಅಭಿಯೋಜಕರು ಕಲಬುರಗಿ ಇವರು ವಾದವನ್ನು ಮಂಡಿಸಿರುತ್ತಾರೆ.

(ಗುರುಲಿಂಗಪ್ಪ ಶ್ರೀಮಂತ ತೇಲಿ)
3ನೇ ಅಪರ ಸರಕಾರಿ ಅಭಿಯೋಜಕರು,
ಕಲಬುರಗಿ.ಮೊ.ನಂ: 9448390177
3ನೇ ಅಪರ ಸರ್ಕಾರಿ ಅಭಿಯೋಜಕರು
ಕಲಬುರಗಿ.

ಇವರಿಗೆ,
ಮಾನ್ಯ ಉಪ ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ ಕಲಬುರಗಿ. ಇವರಿಗೆ ಮಾಹಿತಿಗಾಗಿ ಸದರಿ ಪತ್ರಿಕಾ ಪ್ರಕಟಣೆಯನ್ನು ಎಲ್ಲಾ ಪ್ರಮುಖ ಕನ್ನಡ ಮತ್ತು ಇಂಗ್ಲಿಷ ದಿನಪತ್ರಿಕೆಯಲ್ಲಿ ಮುದ್ರಿಸಲು, ಕ್ರಮ ಕೈಗೊಳಲು ವಿನಂತಿ.